ಗಂಡನಲ್ಲಿ ಹೇಳಿ ಮಂಗಳೂರಿನ ಕಾಲೇಜಿಗೆ ಸೇರಿಸಿದ್ದರು. ರಜಾ ದಿನಗಳಲ್ಲಿ ಗೋಪಾಲಣ್ಣನ ಅಂಗಡಿಯಲ್ಲಿ ಸಹಾಯ ಮಾಡುತ್ತಿದ್ದವ ಪಿ.ಯು.ಸಿಯೊಂದಿಗೆ ಗೋಪಾಲಣ್ಣ ಹೇಳಿದಂತೆ ಟೈಪಿಂಗ್ ಕೂಡ ಕಲಿತಿದ್ದ. ಪಿ.ಯು.ಸಿ ರಿಸಲ್ಟ್ ಬಂದು ಮುಂದೆ ಡಿಗ್ರಿಗೆ ಸೇರ ಬೇಕೆನ್ನುವಷ್ಟರಲ್ಲೇ ವರ್ಕಾಡಿ ಪಂಚಾಯತ್ ಆಫೀಸಿನಲ್ಲಿ ಆರು ತಿಂಗಳ ತಾತ್ಕಾಲಿಕ ಎಲ್.ಡಿ ಕ್ಲರ್ಕ್ ಹುದ್ದೆಯಿದೆಯೆಂದು ಗೋಪಾಲಣ್ಣನ ಗುರ್ತದವರು ಹೇಳಿದ್ದರು. ಗೋಪಾಲಣ್ಣ ಲೆಕ್ಕಾಚಾರ ಹಾಕಿ, "ಕಲಿಯುವುದು ಬೇಕಾದ್ರೆ ಪ್ರೈವೇಟಲ್ಲೂ ಕಲೀಬಹುದು. ಇದೊಂದು ಚಾನ್ಸು. ದೇವರು ಮುಟ್ಟಿಸಿದ್ರೆ ಪರ್ಮನೆಂಟೂ ಆದೀತು. ಬಿಡುವುದು ಬೇಡ" ಅಂತ ಗೊತ್ತಿದ್ದ ಪಾರ್ಟಿ ಲೀಡರನ್ನು ಹಿಡಿದು ಕೆಲಸ ಕೊಡಿಸಿದ್ದರು. ರಮೇಶನಿಗೆ ಇನ್ನಷ್ಟು ಕಲೀಬೇಕೆಂಬ ಮನಸ್ಸಿದ್ದರೂ, "ಗೋಪಾಲಣ್ಣ ಹೇಳುವುದು ಯಾವತ್ತಿದ್ದರೂ ಒಳ್ಳೆಯದ್ದಕ್ಕೆ" ಎಂಬ ಅಮ್ಮನ ಮಾತಿಗೆ ಕಟ್ಟುಬಿದ್ದು ಕೆಲಸಕ್ಕೆ ಸೇರಿದ್ದ. ಆರು ತಿಂಗಳ ಕೆಲಸ ಆ ಪೋಸ್ಟಿಗೆ ಬೇರೆ ಜನ ಬಾರದೆ ದೂಡಿ ದೂಡಿ ಒಂದು ವರ್ಷಕ್ಕೆ ಏರಿತ್ತು. ಇವನ ಗುಣ, ನಡವಳಿಕೆ, ಕೆಲಸದ ರೀತಿ ನೋಡಿ ಖುಷಿಯಾದ ಪಂಚಾಯತ್ ಸೆಕ್ರೆಟರಿ ಒಮ್ಮೆ ತಿರುವನಂತಪುರಕ್ಕೆ ಹೋದವರು ಇವನ ಕೆಲಸವನ್ನು ಕಾಯಂ ಮಾಡಿಸಿಯೇ ಬಂದಿದ್ದರು. ಅದರೆಡೆಯಲ್ಲಿ ಬೇಕಾದ ಪರೀಕ್ಷೆಗಳನ್ನು ರಮೇಶ ಪಾಸು ಮಾಡಿದ್ದ. ಕೆಲಸದೊಂದಿಗೆ ಪ್ರೈವೇಟಾಗಿ ಡಿಗ್ರಿ ಮುಗಿಸಿದವನಿಗೆ ಮೂರು ವರ್ಷದಲ್ಲಿ ಪ್ರೊಮೋಷನ್‌ನೊಂದಿಗೆ ಕಾಸರಗೋಡು ಕಲೆಕ್ಟರ್ ಆಫೀಸಲ್ಲಿ ಕೆಲಸವಾದಾಗ ಇದ್ದ ಐದು ಸೆಂಟಿನಲ್ಲಿ ಬ್ಯಾಂಕು ಲೋನ್, ಕೈಸಾಲ ಮಾಡಿ ಚಿಕ್ಕದೊಂದು ಹಂಚಿನ ಮನೆಯನ್ನೂ ಕಟ್ಟಿಸಿದ್ದ. ಅಮ್ಮ, ಅಜ್ಜಿಯರು ಇನ್ನು ಗುತ್ತಿನಲ್ಲಿ ದುಡಿಯುವುದು ಬೇಡವೆಂಬ ಅವನ ಪ್ರೀತಿಯ ಒತ್ತಾಯಕ್ಕೆ ಕಟ್ಟುಬಿದ್ದು ದೇಯಿ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ್ದಳು. ಆದರೆ, "ತಿಂದದ್ದು ಅರಗಲು ಏನಾದರೂ ಬೇಕಲ್ಲ, ನನ್ನ ಕೈ ಕಾಲು ಆಡುವ ವರೆಗೆ ನಾನು ದುಡಿಯುವವಳೇ" ಎಂಬ ಅಕ್ಕುವಿನ ಹಟವನ್ನು ಬದಲಾಯಿಸಲು ಅವನಿಂದ ಆಗಿರಲಿಲ್ಲ. ತನ್ನ ಎಲ್ಲಾ ಬೆಳವಣಿಗೆ ಹಿಂದೆ ಗುತ್ತಿನ ಮನೆಯ ಉಪ್ಪು, ಮತ್ತು ಅಂತಕ್ಕನ ಕರುಣೆ ಇತ್ತು ಎನ್ನುವುದನ್ನು ಅವನೂ ಮರೆತಿರಲಿಲ್ಲ.

ತನ್ನ ಕಣ್ಣೆದಿರು ಬೆಳೆದ ಹುಡುಗನ ಏಳಿಗೆಯನ್ನು ಅಂತಕ್ಕ ಕೂಡ ಒಂದಿಷ್ಟು ಬೆರಗು ಮತ್ತು ಹೆಮ್ಮೆಯಿಂದಲೇ ಗಮನಿಸುತ್ತಿದ್ದರು. ತನ್ನ ಹೊಟ್ಟೆಯಲ್ಲಿ ಹುಟ್ಟಿದವು ಹತ್ತನೇ ಕ್ಲಾಸು ಕೂಡ ಪಾಸು ಅಗಲಿಲ್ಲವಲ್ಲ ಎಂಬ ನೋವು ಕಾಡಿದರು ಕೂಡ ಅಕ್ಕುವಿನೆಡೆಗೆ ಅವರ ಪ್ರೀತಿ ಬತ್ತದ ಒರತೆಯಂತೆ ನಿರಂತರ ಹರಿದೇ ಇತ್ತು. ಅದೇ ಸಲುಗೆ. ಅದೇ ಗೆಳೆತನ. ಅದೇ ನಂಬಿಕೆಯನ್ನು ಅಕ್ಕುವೂ ಈ ಕಾಲವಿಡೀ ಉಳಿಸಿಕೊಂಡೇ ಬಂದಿದ್ದಳು. ಮದುವೆಯಾಗಿ ಮೂರೇ ತಿಂಗಳಿಗೆ ಗಂಡನ ಸುಖದಿಂದ ವಂಚಿತಳಾದರೂ ಯಾವತ್ತೂ ತನ್ನ ಸೀರೆಯ ಗಂಟನ್ನು ಸಡಿಲಾಗದಂತೆ ನೋಡಿಕೊಂಡ ಅಕ್ಕು ಅಂದರೆ ಅಂತಕ್ಕನಿಗೆ ಪುರಾಣದಲ್ಲಿ ಬರುವ ಸಾವಿತ್ರಿಯಂತೆ! ಅದನ್ನು ಆಗಾಗ ಉಳಿದವರ ಎದುರು ಆಡಿಯೂ ತೋರಿಸುತ್ತಿದ್ದರು. ಎಲ್ಲಿ ಹೋಗುವುದಿದ್ದರೂ ಅಕ್ಕು ಬೇಕು ಜೊತೆಗೆ. ಅಪರೂಪದ ಯಾವ ತಿಂಡಿ, ತೀರ್ಥ ಸವಿಯುವುದಿದ್ದರೂ ಅಕ್ಕುವಿಗೆ ಅದರಲ್ಲಿ ಒಂದು ಪಾಲು. ಕೋಳಿ ಕಟ್ಟಕ್ಕೆ ಹೋದ ಗೋಪಾಲಣ್ಣ ಕಟ್ಟದ ಕೋಳಿ ತಂದರೆ ಪುಳಿಮುಂಚಿಯ ಒಂದೆರಡು ತುಂಡು ಮರೆಯದೆ ನೆಲುವಿನಲ್ಲಿಡುವುದು ಅಕ್ಕುವಿಗೆ ಕೊಡಲು. ಮೂಡೆ, ಕೊಟ್ಟಿಗೆ, ಹಲಸಿನ ಹಣ್ಣಿನ ಗಟ್ಟಿ. ಪತ್ರೊಡೆ, ಎಲ್ಲವನ್ನು ಅಕ್ಕುವಿನೊಂದಿಗೆ ಹಂಚಿಕೊಂಡರೆ ರುಚಿ! ಐಲ ಮೈದಾನದಲ್ಲಿ ವರ್ಷಕ್ಕೊಮ್ಮೆ ಧರ್ಮಸ್ಥಳದ ಆಟ ಬರುತ್ತಿತ್ತು. ಆ ಮೇಳದ ಕುಂಬಳೆ ಸುಂದರಣ್ಣನ ವೇಷ ಎಂದರೆ ಅಂತಕ್ಕನಿಗೆ ಭಾರೀ ಪ್ರೀತಿ. ಗೋಪಾಲಣ್ಣ ಆಟದ ನೋಟಿಸು ತಂದುಕೊಟ್ಟಾಗಲೇ, "ಏ ಅಕ್ಕು ನಾಡಿದ್ದು ಆಟಕ್ಕೆ ಹೋಗುವುದೇ... ನಿದ್ದೆ ನಿದ್ದೆ ಅಂತ ಅಡ್ಡಿ ಹೇಳ್ಬೇಡ" ಮೊದಲೇ ಸೂಚನೆ ಕೊಡುತ್ತಿದ್ದರು. ಕತ್ತಲೆಗೆ ಊಟ ಮುಗಿಸಿ ಇಸಬು ಬ್ಯಾರಿಯ ಜೀಪಿನಲ್ಲಿ ಆಟದ ಮೈದಾನಕ್ಕೆ. ಆಟ ಆರಂಭವಾಗಿ ಕೋಡಂಗಿ